# ಸ್ವಾತಂತ್ರ್ಯ ಪೂರ್ವದಲ್ಲಿ ಮಂಡ್ಯ ಜಿಲ್ಲೆಯಲ್ಲಾದ ಸಮಾಜೋ–ರಾಜಕೀಯದ ಸ್ಥಿತ್ಯಂತರ

**ಶಶಾಂಕ ಕೆ. ಎಸ್.**
ಅತಿಥಿ ಉಪನ್ಯಾಸಕರು
ರಾಜ್ಯಶಾಸ್ತ್ರ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು.

**Article Link: https://aksharasurya.com/2024/04/shashanka-k-s.php**

**DOI: https://doi.org/10.5281/zenodo.10929613**

## ABSTRACT:

'ಸಕ್ಕರೆಯ ಸೀಮೆ' ಎಂದು ಪ್ರಖ್ಯಾತಿ ಪಡೆದುಕೊಂಡಿರುವ ಮಂಡ್ಯ ಜಿಲ್ಲೆ ಇಂದು ರಾಜಕೀಯ, ಸಾಮಾಜಿಕ ಹಾಗೂ ಕೃಷಿ ಕ್ಷೇತ್ರದಲ್ಲಿ ತನ್ನದೆಯಾದ ಮಹತ್ವವನ್ನು ಪಡೆದುಕೊಂಡಿದೆ. ಇದಕ್ಕೆಲ್ಲಾ ಕಾರಣ ಮಂಡ್ಯ ಜಿಲ್ಲೆಯ ಜೀವನಾಡಿ ಕನ್ನಂಬಾಡಿ ಕಟ್ಟೆಯಾಗಿದೆ. ಮೈಸೂರಿನ ಅರಸ ನಾಲ್ವಡಿಯವರನ್ನು ರಾಷ್ಟ್ರಪಿತ ಮಹಾತ್ಮಗಾಂಧಿಯವರು ರಾಜರ್ಷಿಯೆಂದು ಕರೆದರು. ಇದಕ್ಕೆ ನಾಲ್ವಡಿಯವರ ಪ್ರಜಾಹಿತಾತ್ಮಕ ಧೋರಣೆಗಳು. ಸರ್ವಾಧಿಕಾರಿಯೊಬ್ಬ ಪ್ರಜಾಸತ್ತಾತ್ಮಕ ಮನೋಭಾವ ತಳೆಯುವುದು ಜಗತ್ತಿನ ರಾಜಕೀಯ ಇತಿಹಾಸದಲ್ಲಿಯೇ ಅಪರೂಪದ ಸಂಗತಿಯಾಗಿದೆ. ಭಾರತದಲ್ಲಿ ಮಾತ್ರವಲ್ಲದೇ ಏಷ್ಯಾ ಖಂಡದಲ್ಲಿಯೇ ಮೊದಲ ಜಲವಿದ್ಯುತ್ ಯೋಜನೆಯನ್ನು ಪ್ರಾರಂಭಿಸಿದ ಕೀರ್ತಿ ನಾಲ್ವಡಿಯವರಿಗೆ ಸಲ್ಲುತ್ತದೆ. ಹಾಗೆಯೇ ಮಂಡ್ಯ ಜಿಲ್ಲೆಯಲ್ಲಿ ಕೃಷ್ಣರಾಜ ಸಾಗರ ಅಣೆಕಟ್ಟನ್ನು ನಿರ್ಮಿಸಿದರು. ಹೀಗೆ ಒಬ್ಬ ಜವಾಬ್ದಾರಿಯುತ ಮತ್ತು ಸಾಮಾಜಿಕ ಪ್ರಜ್ಞೆಯುಳ್ಳ ಮಹಾರಾಜ ತನ್ನ ನಾಡಿನ ಪ್ರಗತಿಪರ ಕಾರ್ಯಗಳಿಗೆ ಮತ್ತು ಜನತೆಯ ಶ್ರೇಯೋಭಿವೃದ್ಧಿಗೆ ಒತ್ತು ನೀಡಿದ್ದರು. ಈ ಮೂಲಕ ಅವರ ಸಮಾಜೋ–ರಾಜಕೀಯ ನಾಯಕತ್ವವನ್ನು ಗುರುತಿಸಬಹುದಾಗಿದೆ. ಒಟ್ಟಾರೆ ಈ ಜಲಾಶಯದಿಂದ ರೈತರ ಆರ್ಥಿಕ ಸ್ಥಿತಿ ಉತ್ತಮವಾಯಿತು. ಗಾಣಗಳು, ಸಕ್ಕರೆ ಕಾರ್ಖಾನೆಗಳು ತಲೆಯೆತ್ತಿದವು. ಬೆಲ್ಲ, ಸಕ್ಕರೆಯ ಉದ್ಯಮ ಬಿರುಸಾಗಿ ಸಾಗಿತು. ಇಂದು ಮಂಡ್ಯ ಸಕ್ಕರೆನಗರ ಎಂಬ ಖ್ಯಾತಿಗೆ ಪಾತ್ರವಾಗಿದೆ. ಹೀಗೆ ಕೃಷಿಯ ಮೂಲಕ ಮಂಡ್ಯ ಜಿಲ್ಲೆಯ ಸ್ಥಿತ್ಯಂತರಕ್ಕೆ/ಪರಿವರ್ತನೆಗೆ ಕಾರಣವಾದವರು ನಾಲ್ವಡಿಯವರಾಗಿದ್ದಾರೆ.

ಸರ್.ಎಂ. ವಿಶ್ವೇಶ್ವರಯ್ಯನವರು ಕನ್ನಂಬಾಡಿ ಅಣೆಕಟ್ಟೆಯ ಬೃಹತ್ ಯೋಜನೆಗೆ ಮರುಚಾಲನೆ ಕೊಟ್ಟರು. ಇವರು 1913 ರಲ್ಲಿ ಮೈಸೂರು ಬ್ಯಾಂಕನ್ನು ಸ್ಥಾಪಿಸಿದ್ದು ಭಾರತದ ಇತಿಹಾಸದಲ್ಲಿ ದೊಡ್ಡ ಮೈಲಿಗಲ್ಲಾಯಿತು. ವಿಶ್ವೇಶ್ವರಯ್ಯನವರ ಪ್ರೇರಣೆಯಿಂದಾಗಿ ರೇಷ್ಮೆ ಇಲಾಖೆ, ಮೈಸೂರು ಶ್ರೀಗಂಧದ ಸಾಬೂನು

ಕಾರ್ಖಾನೆ, ಶ್ರೀಗಂಧದೆಣ್ಣೆಯ ಕಾರ್ಖಾನೆ, ಸರಕಾರಿ ಮುದ್ರಣಾಲಯ ಹೀಗೆ ಮುಂತಾದ ಕಾರ್ಖಾನೆಗಳು ಸ್ಥಾಪಿತಗೊಂಡವು.

ಸರ್ ಮಿರ್ಜಾ ಇಸ್ಮಾಯಿಲ್ ಅವರು ಮೈಸೂರು-ಬೆಂಗಳೂರು ಮುಖ್ಯ ರಸ್ತೆಯ ಇಕ್ಕೆಲಗಳಲ್ಲಿ ಉದ್ಯಾನವನಗಳು ಹಾಗು ರಸ್ತೆಗಳಿಗೆ ಸಿಮೆಂಟ್ ಹಾಕಿಸಿ ಸುಸಜ್ಜಿತಗೊಳಿಸಿದರು, ಕನ್ನಂಬಾಡಿ ಕಟ್ಟೆಯ ಬೃಂದಾವನ ಉದ್ಯಾನವನ, ಮಂಡ್ಯ ಜಿಲ್ಲಾ ಸಾರ್ವಜನಿಕ ಆಸ್ಪತ್ರೆ, ಮಂಡ್ಯ ಜಿಲ್ಲಾಧಿಕಾರಿ ಭವನವನ್ನು ಸ್ಥಾಪಿಸಿದರು. ಇಂದು ಮೈಸೂರು ಮತ್ತು ಮಂಡ್ಯ ಸುಂದರ ನಗರಗಳೆನಿಸಿಕೊಳ್ಳಲು ಕಾರಣ ಮಿರ್ಜಾ ಇಸ್ಮಾಯಿಲ್.

ಡಾ॥ ಲೆಸ್ಲಿ ಸಿ. ಕೋಲ್ಮನ್ ಅವರು 1931 ರಲ್ಲಿ ವಿಶ್ವೇಶ್ವರಯ್ಯ ನಾಲಾ ಫಾರಂ (ವಿ.ಸಿ.ಫಾರಂ) ಅನ್ನು ಸ್ಥಾಪಿಸಿದರು. ಹಾಗೆಯೇ ಮೈಸೂರು ಸಕ್ಕರೆ ಕಾರ್ಖಾನೆ ಸ್ಥಾಪಿಸಲು ಕೋಲ್ಮನ್ ಕಾರಣರಾದರು.

ಮಂಡ್ಯ ಜಿಲ್ಲೆಯ ಜನರ ಉಸಿರೊಡನೆ ಬೆರೆತು ಹೋದವರು ನಾಲ್ವಡಿ ಕೃಷ್ಣರಾಜ ಒಡೆಯರ್. ಅವರ ಆಶಯಗಳಿಗೆ ರೆಕ್ಕೆ ರೂಪಿಸಿದ ವಿಶ್ವೇಶ್ವರಯ್ಯ ಜೊತೆಗೆ ಮಿರ್ಜಾ ಇಸ್ಮಾಯಿಲ್ ಸ್ಟೈಲ್ ಮಂಡ್ಯಕ್ಕೆ ಆಡಳಿತಾತ್ಮಕವಾದ ಹೆಬ್ಬಾಗಿಲು ತೆರೆಯಿತು. ನೀರು ಹರಿದ ನಾಡಿನಲ್ಲಿ ಅದನ್ನು ಸಿಹಿಯಾದ ಸಕ್ಕರೆಯಾಗಿಸಲು ಅಕ್ಕರೆಯಿಂದ ಕೈಜೋಡಿಸಿದ್ದು ಕೋಲ್ಮನ್. ಹೀಗೆ ಇವರ ಸಾಧನೆಗಳ ಕಾರಣದಿಂದಾಗಿ ಮಂಡ್ಯ ಜಿಲ್ಲೆಯು ಹಲವು ಸ್ಥಿತ್ಯಂತರ/ಪರಿವರ್ತನೆಗೆ ಒಳಗಾಯಿತು. ಹೀಗೆ ಸ್ವಾತಂತ್ರ್ಯಪೂರ್ವದ ರಾಜಪ್ರಭುತ್ವದ ವ್ಯವಸ್ಥೆಯಡಿಯಲ್ಲಿ ಅನೇಕ ಜನಪರ ಕಾರ್ಯಯೋಜನೆಗಳು ಸಾಕಾರಗೊಂಡಿದ್ದವು. ಪ್ರಸ್ತುತ ಲೇಖನದಲ್ಲಿ ಮೈಸೂರು ಸಂಸ್ಥಾನ ಹಾಗೂ ಅದರ ಭಾಗವಾಗಿದ್ದ ಮಂಡ್ಯ ಜಿಲ್ಲಾ ಪ್ರಗತಿಗಾಗಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ದಿವಾನರ ಪಾತ್ರದ ಬಗ್ಗೆ ಚರ್ಚಿಸಲಾಗಿದೆ.

## KEYWORDS:

ಮಂಡ್ಯ, ನಾಲ್ವಡಿ ಕೃಷ್ಣರಾಜ ಒಡೆಯರ್, ಸರ್.ಎಂ. ವಿಶ್ವೇಶ್ವರಯ್ಯ.

ಮನುಷ್ಯ ಮೂಲತಃ ಸಂಘಜೀವಿ. ತನ್ನ ಬದುಕು, ವ್ಯಕ್ತಿತ್ವದ ವಿಕಸನಕ್ಕಾಗಿ ಅವನು ಸಮಾಜದೊಳಗೆ ಬದುಕುವುದು ಅನಿವಾರ್ಯ. ಹೀಗೆ ಒಂದು ಸಾಮಾಜಿಕ ಚೌಕಟ್ಟಿನಡಿಯಲ್ಲಿ ತನ್ನ ಬದುಕನ್ನು ರೂಪಿಸಿಕೊಳ್ಳುವಾಗ ಆ ಸಾಮಾಜಿಕ ವ್ಯವಸ್ಥೆಗೆ ತನ್ನನ್ನು ತಾನು ಒಗ್ಗಿಸಿಕೊಳ್ಳಬೇಕಾಗುತ್ತದೆ. ತನ್ನ ಅಸ್ತಿತ್ವಕ್ಕಾಗಿ ತಾನು ವಾಸಿಸುವ ಪರಿಸರದಲ್ಲಿ ನಂಬಿಕೆ, ಆಚಾರ-ವಿಚಾರ, ಆರ್ಥಿಕ-ಧಾರ್ಮಿಕ-ರಾಜಕೀಯ ವಿಚಾರಗಳ ಕುರಿತ ಅಭಿವೃದ್ಧಿಯನ್ನು ಸಾಧಿಸಬೇಕಾಗುತ್ತದೆ. ವಿವಿಧತೆಯಿಂದ ಕೂಡಿರುವ ಒಂದು ಸಾಮಾಜಿಕ ಪರಿಸರವು ಎಂದಿಗೂ ನಿಂತ ನೀರಾಗುವುದಿಲ್ಲ.

ಅದು ಸದಾ ಚಲನಶೀಲವಾಗಿರುತ್ತದೆ. ಕಾಲದಿಂದ ಕಾಲಕ್ಕೆ, ಪ್ರದೇಶದಿಂದ ಪ್ರದೇಶಕ್ಕೆ, ಮನುಷ್ಯರಿಂದ ಮನುಷ್ಯರಿಗೆ ಸ್ಥಿತ್ಯಂತರಗಳು ಉಂಟಾಗುತ್ತಲೇ ಇರುತ್ತದೆ. ಹೀಗೇ ತನ್ನದೇ ಆದ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ಮಂಡ್ಯ ಜಿಲ್ಲೆಯು ಇದಕ್ಕೆ ಹೊರತಾದುದಲ್ಲ. ಸಂಸ್ಕೃತಿ ಎಂದಿಗೂ ವ್ಯಕ್ತಿ ಕೇಂದ್ರಿತವಲ್ಲ. ಅದು ಒಂದು ಸಮಾಜದ ಮಹತ್ವದ ಆಸ್ತಿಯಾಗಿರುತ್ತದೆ. ಹಾಗಾಗಿ ಮಂಡ್ಯ ಜಿಲ್ಲೆಯು ಸ್ವಾತಂತ್ರ್ಯಪೂರ್ವದಲ್ಲಿ ಸಾಕಷ್ಟು ಸ್ಥಿತ್ಯಂತರಗಳಿಗೆ ಒಳಗಾಗಿದೆ. ಇಲ್ಲಿನ ಕೃಷಿ ಸಂಸ್ಕೃತಿಯು ಮಂಡ್ಯ ಜಿಲ್ಲೆಯ ಪ್ರತೀಕವಾಗಿದೆ. ಇಲ್ಲಿನ ಭಾಷೆ, ನಂಬಿಕೆ, ಆಚರಣೆಗಳು ಮಂಡ್ಯ ಜಿಲ್ಲೆಯ ಜನರ ಸಾಂಸ್ಕೃತಿಕ ಮೌಲ್ಯಗಳಿಗೆ ಹಿಡಿದ ಕನ್ನಡಿಗಳಾಗಿವೆ.

'ಸಕ್ಕರೆಯ ಸೀಮೆ' ಎಂಬ ಪ್ರಖ್ಯಾತಿಯನ್ನು ಪಡೆದುಕೊಂಡಿರುವ ಮಂಡ್ಯ ಜಿಲ್ಲೆಯು 1939 ಜುಲೈ 01 ರಂದು ಪ್ರತ್ಯೇಕ ಜಿಲ್ಲೆಯಾಗಿ ರೂಪುಗೊಂಡಿತು. ಪ್ರಸ್ತುತ ಮಂಡ್ಯ ಜಿಲ್ಲೆಯು ಏಳು ತಾಲ್ಲೂಕುಗಳನ್ನು ಒಳಗೊಂಡಿದ್ದು; ಈ ಜಿಲ್ಲೆಯಲ್ಲಿ ಒಟ್ಟು 1329 ಹಳ್ಳಿಗಳು ಸೇರ್ಪಡೆಗೊಂಡಿವೆ. ನಾಲ್ವಡಿ ಕೃಷ್ಣರಾಜ ಒಡೆಯರ ಶ್ರಮದಿಂದ ಕೃಷ್ಣರಾಜ ಅಣೆಕಟ್ಟಿನ ನಿರ್ಮಾಣದ ನಂತರ ನೀರಾವರಿ ಸೌಲಭ್ಯವನ್ನು ಪಡೆದುಕೊಂಡು ಸಾಮಾಜಿಕ, ಆರ್ಥಿಕ, ರಾಜಕೀಯವಾಗಿ ಅಭಿವೃದ್ಧಿ ಹೊಂದಿದೆ. ಹೀಗೆ ಸ್ವಾತಂತ್ರ್ಯಪೂರ್ವದಲ್ಲಿ ನಾಲ್ವಡಿಯವರೊಂದಿಗೆ ಕೈಜೋಡಿಸಿದ ಸರ್. ಎಂ.ವಿಶ್ವೇಶ್ವರಯ್ಯ, ಸರ್ ಮಿರ್ಜಾ ಇಸ್ಮಾಯಿಲ್, ಡಾ॥ ಲೆಸ್ಲಿ.ಸಿ.ಕೋಲ್ಮನ್ ಅಂದಿನ ಮಂಡ್ಯ ಜಿಲ್ಲೆಯ ರೂಪುರೇಷೆಯನ್ನು ಬದಲಾಯಿಸಲು ಯಶಸ್ವಿಯಾದರು.

**ನಾಲ್ವಡಿ ಕೃಷ್ಣರಾಜ ಒಡೆಯರ್:**

ಮೈಸೂರು ಸಂಸ್ಥಾನದ ಇತಿಹಾಸದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಹೆಸರು ಅಜರಾಮರವಾದುದಾಗಿದೆ. ನಾಲ್ವಡಿ ಕೃಷ್ಣರಾಜ ಒಡೆಯರು ಮೈಸೂರು ಪ್ರಾಂತ್ಯದಲ್ಲಿ ರಾಜ್ಯಾಧಿಕಾರವನ್ನು ನಿರ್ವಹಿಸಿದರು. ಅನೇಕ ಸಾಮಾಜಿಕ ಸುಧಾರಣೆಯನ್ನು ತರುವಲ್ಲಿ ಅವಿರತ ಸಾಧನೆ ಮಾಡಿರುವುದು ಇಲ್ಲಿ ಗಮನೀಯವಾದುದಾಗಿದೆ. ಮೈಸೂರು ಸಂಸ್ಥಾನವನ್ನೊಳಗೊಂಡ ಹಾಗೆ ಸುತ್ತಮುತ್ತಲಿನ ಅನೇಕ ನಗರ ಪ್ರಾಂತ್ಯಗಳನ್ನು ನಿರ್ಮಿಸಿ ಪೂರ್ಣ ಸುಧಾರಣೆಗೊಳಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಪ್ರಜಾನುರಾಗಿಗಳಾಗಿ ಪ್ರಜೆಗಳ ಯೋಗಕ್ಷೇಮಕ್ಕಾಗಿ ಹಗಲಿರುಳು ದುಡಿದು, ಸ್ವದೇಶಿ ಸಾಮರ್ಥ್ಯದ ವ್ಯವಸ್ಥಿತ ಯೋಜನೆ ಮತ್ತು ಆಡಳಿತ ಬಳಕೆಯಿಂದ ರಾಜ್ಯವನ್ನು ಆಧುನೀಕರಿಸಿದ ಮಹಾನ್ ಮುತ್ಸದ್ಧಿ ಇವರಾಗಿದ್ದಾರೆ. ಮುಕ್ತ ಶಿಕ್ಷಣ, ವಯಸ್ಕರ ಶಿಕ್ಷಣ, ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆ, ಉಕ್ಕು, ಸಕ್ಕರೆ, ಕಾಗದ ಕಾರ್ಖಾನೆಗಳ ನಿರ್ಮಾಣ,

ಪ್ರಜಾಪ್ರತಿನಿಧಿ ಸಭೆಯ ರಚನೆ, ಜಲವಿದ್ಯುತ್ ಯೋಜನೆ, ದುರ್ಬಲರು ಹಾಗೂ ಅಲ್ಪಸಂಖ್ಯಾತರಿಗೆ ಪ್ರಾತಿನಿಧ್ಯತೆ, ಅರಮನೆ ದರ್ಬಾರಿನಲ್ಲಿ ಪಂಚಮರಿಗೆ ಪ್ರವೇಶ ಹೀಗೆ ಹತ್ತು ಹಲವಾರು ದಿಟ್ಟ ಸಾಧನೆಗಳಿಗೆ ನಾಲ್ವಡಿಯವರು ಹೆಸರಾಗಿದ್ದಾರೆ. ಮೈಸೂರಿನ ಅರಸ ನಾಲ್ವಡಿ ಕೃಷ್ಣರಾಜರನ್ನು ರಾಷ್ಟ್ರಪಿತ ಮಹಾತ್ಮಗಾಂಧಿಯವರು ರಾಜರ್ಷಿಯೆಂದು ಕರೆದರು. ಇದಕ್ಕೆ ನಾಲ್ವಡಿಯವರ ಪ್ರಜಾಹಿತಾತ್ಮಕ ಧೋರಣೆಗಳು. ಸರ್ವಾಧಿಕಾರಿಯೊಬ್ಬ ಪ್ರಜಾಸತ್ತಾತ್ಮಕ ಮನೋಭಾವ ತಳೆಯುವುದು ಜಗತ್ತಿನ ರಾಜಕೀಯ ಇತಿಹಾಸದಲ್ಲಿಯೇ ಅಪರೂಪದ ಸಂಗತಿಯಾಗಿದೆ.

ಜನಸಾಮಾನ್ಯರಿಗೆ ಉನ್ನತ ಶಿಕ್ಷಣ ದೊರೆಯಬೇಕೆಂಬುದು ಮೈಸೂರು ನಾಲ್ವಡಿ ಕೃಷ್ಣರಾಜ ಒಡೆಯರ ಆಕಾಂಕ್ಷೆಯಾಗಿತ್ತು. ಸ್ವಾತಂತ್ರ ಪೂರ್ವದಲ್ಲಿ ಜನಸಾಮಾನ್ಯರು ಶಿಕ್ಷಣದಿಂದ ವಂಚಿತರಾಗಿದ್ದರು. ಇಂತಹ ಸಾಮಾಜಿಕ ಹಿನ್ನೆಲೆಯಲ್ಲಿ ಒಬ್ಬ ರಾಜ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವುದು, ಅಲ್ಲಿ ಜನಭಾಷೆಯಲ್ಲಿಯೇ ಉನ್ನತಶಿಕ್ಷಣವನ್ನು ನೀಡುವುದು ಮಹತ್ವದ ಸಂಗತಿಗಳಿಗೆ ಸಾಕ್ಷಿಯಾಗಿದೆ. ಇದನ್ನು ಕಾರ್ಯಗತಗೊಳಿಸಿದವರಲ್ಲಿ ಮೊದಲಿಗರು ನಾಲ್ವಡಿಯವರಾಗಿದ್ದಾರೆ. ಹೀಗೆ 1916ರಲ್ಲಿ ಆರಂಭವಾದ ಮೈಸೂರು ವಿಶ್ವವಿದ್ಯಾನಿಲಯ ಇಂದು ವಿಶ್ವದ ಪ್ರತಿಷ್ಠಿತ ವಿಶ್ವವಿದ್ಯಾನಿಲಯಗಳಲ್ಲಿ ಒಂದೆನಿಸಿದೆ. ಹಾಗೆಯೇ ಜನೋಪಯೋಗಿಯಾದ ರಸ್ತೆ, ಆಸ್ಪತ್ರೆ, ವಿದ್ಯುತ್ ಇವೆಲ್ಲವೂ ನಾಲ್ವಡಿಯವರ ಆಳ್ವಿಕೆಯಲ್ಲಿ ಮನ್ನಣೆ ದೊರೆತಿತ್ತು. ಶಿವನಸಮುದ್ರದಲ್ಲಿ ವಿದ್ಯುತ್ ಉತ್ಪಾದಿಸಿದ ಕೀರ್ತಿಯೂ ಇವರಿಗೆ ಸಲ್ಲುತ್ತದೆ. ಹೀಗೆ ಸ್ವಾತಂತ್ರ್ಯ ಪೂರ್ವದಲ್ಲಿಯೇ ಮೈಸೂರು ಹಾಗೂ ಈ ಸಂಸ್ಥಾನಕ್ಕೆ ಸೇರಿದ್ದ ಮಂಡ್ಯ ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗೆ ನಾಲ್ವಡಿಯವರೇ ಅಡಿಪಾಯವನ್ನು ಹಾಕುವಲ್ಲಿ ಯಶಸ್ವಿಯಾದರು.

**ಜಲವಿದ್ಯುತ್ ಯೋಜನೆ:**

ಭಾರತದಲ್ಲಿ ಮಾತ್ರವಲ್ಲದೇ ಏಷ್ಯಾ ಖಂಡದಲ್ಲಿಯೇ ಮೊದಲ ಜಲವಿದ್ಯುತ್ ಯೋಜನೆಯನ್ನು ಪ್ರಾರಂಭಿಸಿದ ಕೀರ್ತಿ ನಾಲ್ವಡಿಯವರಿಗೆ ಸಲ್ಲುತ್ತದೆ. ಮಹಾರಾಜರು 19ನೇ ಶತಮಾನದಲ್ಲಿಯೇ ಕೈಗಾರಿಕೆ, ಗೃಹಬಳಕೆ ಮೊದಲಾದವುಗಳಿಗೆ ವಿದ್ಯುತ್ ಉತ್ಪಾದನೆ ಅತ್ಯವಶ್ಯವೆಂಬ ದೂರದೃಷ್ಟಿಯನ್ನು ಹೊಂದಿದವರಾಗಿದ್ದರು. ಹೀಗಾಗಿ ಅಂದಿನ ದಿವಾನರಾಗಿದ್ದ ಕೆ.ಶೇಷಾದ್ರಿ ಅಯ್ಯರ್‌ರವರ ಮಾರ್ಗದರ್ಶನದಲ್ಲಿ 1902ರಲ್ಲಿ ಮಳವಳ್ಳಿ ತಾಲ್ಲೂಕಿನ ಶಿವನಸಮುದ್ರದಲ್ಲಿ ಜಲವಿದ್ಯುತ್ ಉತ್ಪಾದನಾ ಕೇಂದ್ರವನ್ನು ಸ್ಥಾಪಿಸಲಾಯಿತು. ಈ ಕೇಂದ್ರ ಕಾರ್ಯಾರಂಭ ಮಾಡಿದಾಗ ಉತ್ಪಾದನಾ ಸಾಮರ್ಥ್ಯ 4.300 ಕಿ.ವ್ಯಾ. ಗಳಾಗಿತ್ತು. ಪ್ರಾರಂಭದಲ್ಲಿ "ಉತ್ಪಾದನೆ ಮಾಡಿದ

ವಿದ್ಯುತ್ ಶಕ್ತಿಯನ್ನು ಸುಮಾರು 150 ಕಿ.ಮೀ ದೂರದ ಕೋಲಾರದ ಚಿನ್ನದ ಗಣಿಗೆ, ನಂತರ ಬೆಂಗಳೂರಿಗೆ 1905ರಲ್ಲಿ ವಿದ್ಯುತ್‌ಚ್ಛಕ್ತಿಯನ್ನು ಒದಗಿಸಲಾಯಿತು".[1] ಭಾರತದಲ್ಲಿಯೇ ವಿದ್ಯುಚ್ಛಕ್ತಿ ಪಡೆದ ಪ್ರಥಮ ನಗರ ಎಂಬ ಹೆಗ್ಗಳಿಕೆಗೆ ಬೆಂಗಳೂರು ನಗರ ಹೆಸರಾಯಿತು. ಹಾಗೆಯೇ ಮೈಸೂರು ಸಂಸ್ಥಾನದಲ್ಲಿಯು ವಿದ್ಯುತ್ ಜಾಲದ ಮೂಲಕ ವಿದ್ಯುತ್ತನ್ನು ಪೂರೈಕೆ ಮಾಡಲಾಗುತ್ತಿತ್ತು.

ಇದರಿಂದ ಕೈಗಾರಿಕೆಗಳ ಬೆಳವಣಿಗೆಗೆ ತೀವ್ರ ವೇಗ ದೊರಕಿತು. ಜೊತೆಗೆ ಸರ್ಕಾರವು ಗ್ರಾಮೀಣ ಭಾಗದ ರೈತರಿಗೆ ನೀರೆತ್ತುವ ಪಂಪುಗಳನ್ನು ಸಾಲದ ಯೋಜನೆ ಮುಖಾಂತರ ಪೂರೈಸಿದ್ದಲ್ಲದೆ ಕಡಿಮೆ ದರದಲ್ಲಿ ವಿದ್ಯುತ್ತನ್ನು ಪೂರೈಸಿ ನೀರಾವರಿ ಮತ್ತು ಕೃಷಿ ಅಭಿವೃದ್ಧಿಗೆ ಪ್ರೋತ್ಸಾಹ ನೀಡಿತು. ಇಂಥ ಸಾಮಾಜಿಕ ಕೊಡುಗೆಯ ಕಾರಣದಿಂದಾಗಿ ನಾಲ್ವಡಿಯವರನ್ನು ಮೈಸೂರು ಸಂಸ್ಥಾನದ ಜನಸಾಮಾನ್ಯರು "ನಾಲ್ವಡಿ ಭೂಪ, ಮನೆ ಮನೆಗೂ ದೀಪ" ಎಂದು ಕೊಂಡಾಡಿದರು.

**ಕನ್ನಂಬಾಡಿ ಅಣೆಕಟ್ಟೆಯ ನಿರ್ಮಾಣ:**

ನಾಲ್ವಾಡಿಯವರು 1911ರಲ್ಲಿ ಶ್ರೀರಂಗಪಟ್ಟಣದಿಂದ ಸು. 14.5 ಕಿ.ಮೀ ಹಾಗೂ ಮೈಸೂರಿನಿಂದ 19 ಕಿ.ಮೀ ದೂರದಲ್ಲಿರುವ ಕನ್ನಂಬಾಡಿ ಎಂಬ ಗ್ರಾಮದ ಬಳಿ ಕಾವೇರಿ ನದಿಗೆ ಅಡ್ಡಲಾಗಿ ಅಣೆಕಟ್ಟೆ ನಿರ್ಮಿಸಲು ಮುಂದಾದರು. ಕೃಷ್ಣರಾಜ ಒಡೆಯರು ಈ ಯೋಜನೆಗೆ ತಮ್ಮ ಒಪ್ಪಿಗೆಯನ್ನು ಸೂಚಿಸಿ 1911ರ ಅಕ್ಟೋಬರ್ 12ರಂದು ಆದೇಶ ಹೊರಡಿಸಿದರು. "ಈ ಯೋಜನೆಗೆ ತಗುಲಿದ ಒಟ್ಟು ವೆಚ್ಚ 253 ಲಕ್ಷ ರೂಪಾಯಿಗಳು. ಅದಕ್ಕಾಗಿ ಅರಮನೆಯ ಖಾಸಗಿ ಭಂಡಾರದಲ್ಲಿದ್ದ ನಾಲ್ಕು ಭಾರೀ ಮೂಟೆಗಳ ವಜ್ರ–ವೈಢೂರ್ಯಗಳ ಆಭರಣಗಳು ಬೊಂಬಾಯಿಗೆ ತೆಗೆದುಕೊಂಡು ಹೋಗಿ ಅಲ್ಲಿ ಮಾರಾಟಮಾಡಿ ಆ ಹಣವನ್ನು ಕನ್ನಂಬಾಡಿ ಕಟ್ಟೆಗೆ ವಿನಿಯೋಗಿಸಲಾಯಿತು".[2] ಹೀಗೆ ಒಬ್ಬ ಜವಾಬ್ದಾರಿಯುತ ಮತ್ತು ಸಾಮಾಜಿಕ ಪ್ರಜ್ಞೆಯುಳ್ಳ ಮಹಾರಾಜ ತನ್ನ ನಾಡಿನ ಪ್ರಗತಿಪರ ಕಾರ್ಯಗಳಿಗೆ ಮತ್ತು ಜನತೆಯ ಶ್ರೇಯೋಭಿವೃದ್ಧಿಗೆ ಒತ್ತು ನೀಡಿದ್ದರು. ಈ ಮೂಲಕ ಅವರ ಸಮಾಜೋ–ರಾಜಕೀಯ ನಾಯಕತ್ವವನ್ನು ಗುರುತಿಸಬಹುದಾಗಿದೆ.

ಈ ಎಲ್ಲಾ ಸರ್ವಪ್ರಯತ್ನಗಳಿಂದ 1911ರಲ್ಲಿ ಪ್ರಾರಂಭವಾದ ಯೋಜನೆಯು 1930ರಲ್ಲಿ ಮುಕ್ತಾಯಗೊಂಡಿತು. ಇದರಿಂದ 1,20,000 ಎಕ್ಕರೆಗಳಿಗೆ ನೀರಾವರಿ ಕಲ್ಪಿಸಲು ಸಾಧ್ಯವಾಹಿತು. ರಾಜ್ಯದ ಸರ್ವತೋಮುಖ ಅಭಿವೃದ್ಧಿಗಾಗಿ ನಿರ್ಮಾಣಗೊಂಡ ಈ "ಜಲಾಶಯದ ನಿರ್ಮಾಣ ಕಾರ್ಯದಲ್ಲಿ ಎಂ.ವಿಶ್ವೇಶ್ವರಯ್ಯ, ಟಿ.ಆನಂದರಾವ್, ಮಿರ್ಜಾ.ಎಂ.ಇಸ್ಮಾಯಿಲ್‌ರಂತಹ ದಿವಾನರೂ, ಕರ್ಪೂರ

ಶ್ರೀನಿವಾಸರಾವ್, ಬಿ.ಸುಬ್ಬರಾವ್, ಕೆ.ಕೃಷ್ಣಯ್ಯಂಗಾರ್, ಕೆ.ಆರ್.ಶೇಷಾಚಾರ್, ಹೆಚ್.ಪಿ.ಗಿಬ್ಸ್ ಮುಂತಾದ ಇಂಜಿನಿಯರರು ಹಾಗೂ ಅಸಂಖ್ಯಾತ ಕಾರ್ಮಿಕರ ನಿರಂತರ ಪರಿಶ್ರಮವಿತ್ತು. 1917ರಲ್ಲಿ ಕನ್ನಂಬಾಡಿ ಜಲಾಶಯಕ್ಕೆ ಮಹಾರಾಜರ ಹೆಸರಿನಲ್ಲಿ "ಕಷ್ಣರಾಜ ಸಾಗರ" ಎಂದು ನಾಮಕರಣ ಮಾಡುವ ಮೂಲಕ ಈ ಮಹತ್ಕಾರ್ಯದ ಮೂಲ ಸೂತ್ರಧಾರಿಗೆ ಗೌರವವನ್ನು ಸಲ್ಲಿಸಲಾಯಿತು."[3]

ಕೃಷ್ಣರಾಜ ಸಾಗರ ಜಲಾಶಯವು ಮಂಡ್ಯ ಜಿಲ್ಲೆಗೆ ವರವಾಗಿ ಪರಿಣಮಿಸಿತು. ಇದಕ್ಕೆ ಮೊದಲು ಮಳೆ ಆಶ್ರಯದಲ್ಲಿ ಹುರುಳಿ, ರಾಗಿ, ಸಜ್ಜೆ, ಹಾರಕ, ನವಣೆ ಮೊದಲಾದ ಧಾನ್ಯ ಬೆಳೆಯುತ್ತಿದ್ದ ರೈತರು ಭತ್ತ, ಕಬ್ಬು ಬೆಳೆಯಲು ಸಾಧ್ಯವಾಯಿತು. ಕಬ್ಬು ನಿಜಕ್ಕೂ ಮಂಡ್ಯದ ರೈತರ ಬದುಕನ್ನು ಸಿಹಿಯಾಗಿಸಿತು. ಅವರ ಆರ್ಥಿಕ ಸ್ಥಿತಿ ಉತ್ತಮವಾಯಿತು. ಗಾಣಗಳು, ಸಕ್ಕರೆ ಕಾರ್ಖಾನೆಗಳು ತಲೆಯೆತ್ತಿದವು. ಬೆಲ್ಲ, ಸಕ್ಕರೆಯ ಉದ್ಯಮ ಬಿರುಸಾಗಿ ಸಾಗಿತು. ಇಂದು ಮಂಡ್ಯ ಸಕ್ಕರೆನಗರ ಎಂಬ ಖ್ಯಾತಿಗೆ ಪಾತ್ರವಾಗಿದೆ. ಹೀಗೆ ಕೃಷಿಯ ಮೂಲಕ ಮಂಡ್ಯ ಜಿಲ್ಲೆಯ ಸ್ಥಿತ್ಯಂತರಕ್ಕೆ / ಪರಿವರ್ತನೆಗೆ ಕಾರಣರಾದವರು ನಾಲ್ವಡಿಯವರಾಗಿದ್ದಾರೆ.

**ಮೈಷುಗರ್ ಕಾರ್ಖಾನೆ:**

ಮಂಡ್ಯದಲ್ಲಿ ಸ್ಥಾಪಿತವಾಗಿರುವ ಮೈಸೂರು ಸಕ್ಕರೆ ಕಾರ್ಖಾನೆ. ನಾಲ್ವಡಿ ಕೃಷ್ಣರಾಜ್ ಒಡೆಯರ್ ದೂರದೃಷಿಯಿಂದಾಗಿ "1934ರ ಜನವರಿಯಲ್ಲಿ ಇದು ಸು. 20 ಲಕ್ಷ ರೂಪಾಯಿಗಳ ಬಂಡವಾಳದೊಂದಿಗೆ ಹುಟ್ಟಿಕೊಂಡಿತು. ಈ ಕಾರ್ಖಾನೆ 1934ರ ವೇಳೆಗೆ ಪೂರ್ಣ ಪ್ರಮಾಣದಲ್ಲಿ ತನ್ನ ಉತ್ಪಾದನಾ ಕಾರ್ಯವನ್ನು ಆರಂಭಗೊಳಿಸಿತು".[4]

ಒಟ್ಟಾರೆ ಕೆ.ಆರ್.ಎಸ್. ನಿರ್ಮಾಣದಿಂದ ನೀರಾವರಿ ಅಭಿವೃದ್ಧಿ, ಕೈಗಾರಿಕಾ ಪ್ರಗತಿ, ಜಲವಿದ್ಯುತ್ ಯೋಜನೆಗಳ ವಿಸ್ತರಣೆ ಮುಂತಾದವು ನಡೆದವು. ಒಂದಿಷ್ಟು ಭೂಮಿ ಮುಳುಗಿ ನಷ್ಟವಾದರೂ ಹೊಸದಾಗಿ 1 ಲಕ್ಷ 25 ಸಾವಿರ ಎಕರೆಗೂ ಹೆಚ್ಚು ಭೂಮಿಗೆ ನೀರುಣಿಸುವಂತಾದುದು ಮುಖ್ಯ. ಇದರಿಂದ ಮಂಡ್ಯ ಜಿಲ್ಲೆಯ ಚಿತ್ರಣವೇ ಬದಲಾಯಿತು. ಭತ್ತ ಮತ್ತು ಕಬ್ಬು ಮುಖ್ಯ ಬೆಳೆಗಳಾದವು, ಬೇಸಿಗೆ ಬೆಳೆ ತೆಗೆಯಲು ಸಾಧ್ಯವಾಯಿತು. ವ್ಯವಸಾಯಾಭಿವೃದ್ಧಿಯಿಂದ ಕೈಗಾರಿಕೆ, ವ್ಯವಸಾಯೋಪಕರಣಗಳು, ರಸಗೊಬ್ಬರ ಕಾರ್ಖಾನೆ. ಕಬ್ಬಿನಿಂದ ಬೆಲ್ಲ ತೆಗೆಯುವ ಸಾವಿರಾರು ಆಲೆಮನೆಗಳಾದವು. ಕಾಗದ ತಯಾರಿಕೆ, ಸಕ್ಕರೆ ಕಾರ್ಖಾನೆಗಳಾದವು. ದಿನದಿನಕ್ಕೂ ಮಹತ್ವದ್ದಾಗುವ ಹೊಸ ಹೊಸ ಸಾಧ್ಯತೆಗಳ ಸುದೀರ್ಘ ಪರಂಪರೆಯನ್ನೇ ಜಲಾಶಯ ತೆರೆಯಿತು. ಹೀಗೆ ಬಡತನದಿಂದ ಖಿನ್ನವಾಗಿದ್ದ

ಮುಖಗಳಲ್ಲಿ ಸಿರಿವಂತಿಕೆಯ ಸಸಿ ಚಿಗರೊಡೆದು ನಗುವಿನ ಸೆಲೆಯೊಡೆಯಿತು. ಅನಾಥನಂತಿದ ಮಂಡ್ಯ ಇದ್ದಕ್ಕಿದ್ದಂತೆಯೇ ಸಿರಿವಂತಿಕೆಯ ಹೊಸಯುಗಕ್ಕೆ ಕಾಲಿಟ್ಟಿತು. ಪಟ್ಟಣದ ರೂಪವೇ ಬದಲಾಯಿತು. ಹಳೆಯ ಮೈಸೂರು ರಾಜ್ಯದ 'ಭತ್ತದ ಕಣಜ' ಎಂದು ಹೆಸರಾಯಿತು.

**ಸರ್.ಎಂ.ವಿಶ್ವೇಶ್ವರಯ್ಯ:**

ನಾಲ್ವಡಿಯವರ ಕಾರ್ಯಕ್ಕೆ ವಿಶ್ವೇಶ್ವರಯ್ಯನವರ ಬುದ್ಧಿವಂತಿಕೆ, ಶ್ರಮ ಜೊತೆಯಾಗಿ ನಿಂತು ಮಂಡ್ಯದ ಭವಿಷ್ಯವನ್ನು ನಿರ್ಧರಿಸುವಂತಾಯಿತು. ಇಲ್ಲಿನ ಜೀವನಸ್ಥಿತಿ ಸುಧಾರಿಸುವುದರೊಂದಿಗೆ ಆಧುನಿಕ ಸೌಲಭ್ಯಗಳು ಹೆಚ್ಚಾದವು. ಕೈಗಾರಿಕೆಗಳ ಸ್ಥಾಪನೆ, ವಿದ್ಯಾಭ್ಯಾಸಗಳ ಪ್ರಗತಿಯೊಂದಿಗೆ ನಾಡಿನ ಪ್ರಗತಿಯೂ ಸಾಗಿತು. ಹಾಗೆಯೇ ಕೃಷ್ಣರಾಜ ಸಾಗರ ಅಣೆಕಟ್ಟಿನ ನಿರ್ಮಾಣದ ನೇತೃತ್ವ ವಹಿಸಿ ರೈತರ ಒಳಿತಿಗೆ ಶ್ರಮಿಸಿದರು.

"ಕನ್ನಂಬಾಡಿ ಅಣೆಕಟ್ಟೆಯ ಮುಖ್ಯ ಇಂಜಿನಿಯರ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಮತ್ತು ಅಣೆಕಟ್ಟೆಯ ಅಂದಾಜು ನೀಲನಕ್ಷೆ ತಯಾರಿಸಿದ್ದ ಕ್ಯಾಪ್ಟನ್ ಬರ್ನಾಡ್ ಡಾವಸ್ ಅವರು ಅಣೆಕಟ್ಟೆ ನಿರ್ಮಾಣ ಸಂದರ್ಭದಲ್ಲಿ ಅಕಸ್ಮಾತ್ತಾಗಿ ನೀರಿಗೆ ಸಿಕ್ಕಿ ಮೃತರಾದರು."[5] ಅಂಥ ಸಂದರ್ಭದಲ್ಲಿ ಇಂಥ ಬೃಹತ್ ಯೋಜನೆಗೆ 1909ರಲ್ಲಿ ಶ್ರೀ ನಾಲ್ವಡಿ ಅವರಿಂದ ನೇಮಕಗೊಂಡ ಮುಖ್ಯ ಇಂಜಿನಿಯರ್ ಆಗಿ ಕಾರ್ಯನಿಯೋಜನೆಗೊಂಡ ಸರ್.ಎಂ. ವಿಶ್ವೇಶ್ವರಯ್ಯನವರು ಆ ಯೋಜನೆಗೆ ಮರುಚಾಲನೆ ಕೊಟ್ಟರು.

ಅದಕ್ಕಾಗಿ "ಇಂಜಿನಿಯರ್ ಕ್ಯಾಪ್ಟನ್ ಬರ್ನಾಡ್ ಡಾವಸ್"[6] ರವರು ರೂಪಿಸಿದ್ದ 80 ಅಡಿ ಎತ್ತರದ ಕಟ್ಟಡಕ್ಕೆ ಬದಲಾಗಿ ವಿಶ್ವೇಶ್ವರಯ್ಯನವರು 130 ಅಡಿ ಎತ್ತರದ ಮತ್ತು 8600 ಅಡಿಗಳ ಉದ್ದದ ಕಟ್ಟೆಯನ್ನು ನಿರ್ಮಿಸಲು ಯೋಜಿಸಿದರು. ಇದರಲ್ಲಿ ಸಂಗ್ರಹವಾಗುವ ಜಲದಿಂದ ಒಂದೂವರೆ ಲಕ್ಷ ಎಕರೆಗಳಿಗೆ ನೀರು ಒದಗಿಸುವುದಲ್ಲದೆ ವಿದ್ಯುತ್ ಉತ್ಪಾದನೆಗೆ ಸಾಕಾಗುವಷ್ಟು ನೀರು ಪೂರೈಕೆಯನ್ನು ಮಾಡಬಹುದಾಗಿತ್ತು.

ಕೃಷ್ಣರಾಜ ಸಾಗರ ಅಣೆಕಟ್ಟನ್ನು ಕಟ್ಟಲು ಪ್ರಾರಂಭ ಮಾಡಿದಾಗ ವಿಶ್ವೇಶ್ವರಯ್ಯನವರು ಅನೇಕ ಸವಾಲುಗಳು ಮತ್ತು ನಾನಾ ರೀತಿಯ ಸಮಸ್ಯೆಗಳನ್ನು ಎದುರಿಸಬೇಕಾಯಿತು. ವಿಶೇಷವಾಗಿ ಅವು ತಾಂತ್ರಿಕ ಸಮಸ್ಯೆಗಳಾಗಿದ್ದವು. ಆ ಕಾಲದಲ್ಲಿ, ದೇಶದಲ್ಲಿ ಸಿಮೆಂಟ್ ಸುಲಭವಾಗಿ ದೊರೆಯುತ್ತಿರಲಿಲ್ಲ. ಸಿಮೆಂಟ್ ಬೇಕೆಂದರೆ ಅತ್ಯಂತ ದುಬಾರಿ ಬೆಲೆಗೆ ವಿದೇಶಗಳಿಂದ ಆಮದು ಮಾಡಿಕೊಳ್ಳಬೇಕಾಗಿ

ತ್ತು.

ಕೆ.ಆರ್.ಎಸ್. ನಿರ್ಮಾಣದ ಸಂದರ್ಭದಲ್ಲಿ ಸಿಮೆಂಟ್ ದುಬಾರಿ ವಸ್ತುವಾದುದರಿಂದ ಮತ್ತು ಸುಲಭವಾಗಿ ಸಿಗದಿದ್ದುದರಿಂದ ಸಿಮೆಂಟಿಗೆ ಬದಲಾಗಿ ಸುಣ್ಣಕಲ್ಲು, ಸುಟ್ಟ ಇಟ್ಟಿಗೆಗಳ ಚೂರು, ಮರವಜ್ರ ಮತ್ತು ಮರಳನ್ನು ನೀರಿನಲ್ಲಿ ಬೆರೆಸಿ ಎತ್ತುಗಳ ಗಾಣಹೂಡಿ ಅತಿ ನುಣ್ಣಗೆ ಅರೆದು ಸಿದ್ಧಪಡಿಸಿದ್ದರು. ಸುರ್ಕಿ ಗಾರೆಯನ್ನು ಅಣೆಕಟ್ಟು ಕಟ್ಟಲು ಬಳಸಲಾಯಿತು. ಅಣೆಕಟ್ಟನ್ನು ಕಟ್ಟುವಾಗ ಗ್ರಾನೈಟ್ ಕಲ್ಲುಗಳನ್ನು ಬಳಸಿ, ಮಧ್ಯದಲ್ಲಿ ಮುರುಡುಕಲ್ಲು ಮತ್ತು ಸುರ್ಕಿ ಗಾರೆಗಳನ್ನು ಬಳಸಿ ಕಲ್ಲುಗಳನ್ನು ವರಸೆ ವರಸೆಯಾಗಿ ಜೋಡಿಸಿ ಅವುಗಳ ಮಧ್ಯೆ ನುಣ್ಣಗೆ ಅರೆದ ಸುರ್ಕಿ ಗಾರೆ ಸೇರಿಸಿ ಕಟ್ಟಲಾಗಿದೆ. ಈ ಅಣೆಕಟ್ಟು ಕಟ್ಟುವ ಕೆಲಸಕ್ಕೆ ಯಾವುದೇ ಗುತ್ತಿಗೆ ನೀಡದೆ ಲೋಕೋಪಯೋಗಿ ಇಲಾಖೆಯೇ ಇಂಜಿನಿಯರ್‌ಗಳನ್ನು ನೇಮಕಮಾಡಿಕೊಂಡು ಕಾಮಗಾರಿ ನಡೆಸಿದ್ದರಿಂದ ಬಹಳಷ್ಟು ಹಣ ಉಳಿತಾಯವಾಯಿತು ಮತ್ತು ಗುಣಮಟ್ಟವು ಉತ್ಕೃಷ್ಟವಾಗಿತ್ತು.

ಒಟ್ಟಾರೆ "ಅಣೆಕಟ್ಟಿನ ಬೇರೆ ಬೇರೆ ಮಟ್ಟದಲ್ಲಿ ವಿವಿಧ ಅಳತೆಯ ಒಟ್ಟು 173 ತೂಬುಗಳನ್ನು ಜೋಡಿಸಲಾಗಿದೆ. ಪ್ರವಾಹದ ನೀರು ಹರಿಯಲು ಪ್ರತ್ಯೇಕ ತೂಬುಗಳನ್ನು ಅಳವಡಿಸಲಾಗಿದೆ, ಹಾಗೆಯೇ ಕೆಸರು ಕೊಚ್ಚಿ ಹೋಗುವಂತೆ ಮಾಡಲು ಪ್ರತ್ಯೇಕ ತೂಬುಗಳನ್ನು ಅಳವಡಿಸಲಾಗಿದೆ. ಜೊತೆಗೆ ನೀರಾವರಿಗಾಗಿ ಹಾಗೂ ವಿದ್ಯುತ್ ಉತ್ಪಾದನಾ ಘಟಕಕ್ಕೆ ನೀರು ಹರಿಸಲು ಪ್ರತ್ಯೇಕ ತೂಬುಗಳನ್ನು ಅಳವಡಿಸಲಾಗಿದೆ. ದಕ್ಷಿಣ ದ್ವಾರದ ಆಚೆಗೆ ಎಂಟು ಅಡಿ ಅಗಲ ಮತ್ತು 12 ಅಡಿ ಎತ್ತರ ಇರುವ 40 ತೂಬುಗಳಿವೆ. ಹಾಗೆಯೇ ಸ್ವಯಂಚಾಲಿತ ಬಾಗಿಲುಗಳನ್ನು ಜೋಡಿಸಲಾಗಿದೆ. ಜಲಾಶಯದ ಮಟ್ಟ 124 ಅಡಿಗೆ ಮುಟ್ಟುತ್ತಿದ್ದಂತೆ ಇವು ಸ್ವಯಂಚಾಲಿತವಾಗಿ ತೆರೆದುಕೊಳ್ಳುತ್ತವೆ."[7]

ಹೀಗೆ ಈ ಯೋಜನೆಯು 1911 ರಲ್ಲಿ ಪ್ರಾರಂಭವಾಗಿ 1932 ರಲ್ಲಿ ಮುಕ್ತಾಯವಾಯಿತು. ಅಮೇರಿಕಾದ ವಿದ್ವಾಂಸ ಡಾ॥ ಹೆನ್ರಿ ಸಿಹಾರ್ಟ್ 'ಭಾರತದ ಆಧುನಿಕ ನದಿಗಳು' ಎಂಬ ತಮ್ಮ ಪುಸ್ತಕದಲ್ಲಿ ವಿಶ್ವೇಶ್ವರಯ್ಯನವರು ಶ್ರಮವಹಿಸಿ ಕಟ್ಟಿಸಿದ ಕೃಷ್ಣರಾಜಸಾಗರ ಅಣೆಕಟ್ಟೆಯ ಬಗೆಗೆ ಈ ರೀತಿ ವರ್ಣಿಸಿದ್ದಾರೆ. "ಪ್ರಪಂಚದಲ್ಲಿ ಏನಾದರೂ ಏಕವ್ಯಕ್ತಿಯ ಅಣೆಕಟ್ಟುಗಳು ಇದ್ದರೆ ಅವು ಕೃಷ್ಣರಾಜ ಸಾಗರ ಅಣೆಕಟ್ಟೆಗಿಂತ ಸಣ್ಣ ಪ್ರಮಾಣದ ಅಣೆಕಟ್ಟುಗಳಾಗಿರುತ್ತವೆ. ಈ ಪುಸ್ತಕದಲ್ಲಿ ಒಂದು ಅಧ್ಯಾಯವನ್ನು ವಿಶ್ವೇಶ್ವರಯ್ಯನವರ ವಿಚಾರಕ್ಕೆ ಮುಡಿಪಾಗಿಡಲಾಗಿದೆ. ಅದರಲ್ಲಿ "ವಿಶ್ವೇಶ್ವರಯ್ಯನವರು ಮುಂಗಾರು ಮಳೆಯನ್ನು ದಾಸ್ತಾನು ಮಾಡಿದ

ವ್ಯಕ್ತಿ" ಎಂದು ತಮ್ಮ ಗೌರವವನ್ನು ಸೂಚಿಸಿದ್ದಾರೆ.

ಹೀಗೆ ಮೈಸೂರು ಸಂಸ್ಥಾನದ ಚೀಫ್ ಇಂಜಿನಿಯರ್ ಆಗಿ, ದಿವಾನರಾಗಿ ಸಮೃದ್ಧ ಮೈಸೂರಿನ ಸಮಗ್ರ ಮುನ್ನೋಟವನ್ನು ಹೊಂದಿದ್ದ ವಿಶ್ವೇಶ್ವರಯ್ಯನವರು ಸಲ್ಲಿಸಿದ ಸೇವೆಗಳು ಅಪರಿಮಿತವಾಗಿವೆ. 1913 ರಲ್ಲಿ ಅವರು ಮೈಸೂರು ಬ್ಯಾಂಕನ್ನು ಸ್ಥಾಪಿಸಿದ್ದು ಭಾರತದ ಇತಿಹಾಸದಲ್ಲಿ ದೊಡ್ಡ ಮೈಲಿಗಲ್ಲಾಯಿತು. "ಇಡೀ ಭಾರತದಲ್ಲಿ ಆಗ ಇದ್ದದ್ದು ಕೆಲವೇ ಕೆಲವು ಬ್ಯಾಂಕುಗಳು; ವಾಸ್ತವವಾಗಿ ಅವು ಬ್ರಿಟಿಷ್ ಸರಕಾರದ ಹಣಕಾಸಿನ ನಿರ್ವಹಣೆ ಮಾಡುತ್ತಿದ್ದ ಇಂಗ್ಲಿಷ್ ಬ್ಯಾಂಕುಗಳಾಗಿದ್ದವು. ಆ ದೃಷ್ಟಿಯಿಂದ ಭಾರತದಲ್ಲಿ ಪ್ರಥಮ ಬ್ಯಾಂಕನ್ನು ಸ್ಥಾಪಿಸಿದ ಭಾರತೀಯ ಎಂಬ ಪ್ರಖ್ಯಾತಿಗೆ ವಿಶ್ವೇಶ್ವರಯ್ಯನವರು ಭಾಜನರಾಗಿದ್ದಾರೆ".[8]

ವಿಶ್ವೇಶ್ವರಯ್ಯನವರ ಪ್ರೇರಣೆ ಮತ್ತು ಉತ್ತೇಜನದಿಂದಾಗಿ ಇಂಜಿನಿಯರಿಂಗ್ ಶಿಕ್ಷಣ ಸಂಸ್ಥೆಗಳು, ರೇಷ್ಮೆ ಇಲಾಖೆ, ಮೈಸೂರು ಶ್ರೀಗಂಧದ ಸಾಬೂನು ಕಾರ್ಖಾನೆ, ಶ್ರೀಗಂಧದೆಣ್ಣೆಯ ಕಾರ್ಖಾನೆ, ಚರ್ಮ ಹದ ಮಾಡುವ ಕಾರ್ಖಾನೆಗಳು, ಸರಕಾರಿ ಮುದ್ರಣಾಲಯ, ಹೀಗೆ ಮುಂತಾದ ಕಾರ್ಖಾನೆಗಳು ಸ್ಥಾಪಿತಗೊಂಡವು, ಇವುಗಳ ಜೊತೆಗೆ ಮೈಸೂರು ಸಂಸ್ಥಾನಕ್ಕೆ ತನ್ನದೇ ಆದ ವಿಶ್ವವಿದ್ಯಾನಿಲಯ ಬೇಕೆಂದು ಬ್ರಿಟಿಷ್ ಆಡಳಿತಗಾರರನ್ನು ಒಪ್ಪಿಸಿ ಮೈಸೂರು ವಿಶ್ವವಿದ್ಯಾನಿಲಯ ಸಾಕಾರಗೊಳ್ಳಲು ಕಾರಣರಾದರು.

ಹೀಗೆ ನಾಲ್ವಡಿಯವರ ಕಾರ್ಯಕ್ಕೆ ವಿಶ್ವೇಶ್ವರಯ್ಯನವರ ಬುದ್ಧಿವಂತಿಕೆ ಮತ್ತು ಶ್ರಮ ಜೊತೆಯಾಗಿ ನಿಂತು ಮಂಡ್ಯದ ಭವಿಷ್ಯವನ್ನು ನಿರ್ಧರಿಸುವಂತಾಯಿತು. ಇಲ್ಲಿನ ಜೀವನಸ್ಥಿತಿ ಸುಧಾರಿಸುವುದರೊಂದಿಗೆ ಆಧುನಿಕ ಸೌಲಭ್ಯಗಳು ಹೆಚ್ಚಾದವು. ಕೈಗಾರಿಕೆಗಳ ಸ್ಥಾಪನೆ, ವಿದ್ಯಾಭ್ಯಾಸಗಳ ಪ್ರಗತಿಯೊಂದಿಗೆ ನಾಡಿನ ಪ್ರಗತಿಯೂ ಸಾಗಿತು.

**ಸರ್ ಮಿರ್ಜಾ ಇಸ್ಮಾಯಿಲ್:**

ಮಿರ್ಜಾ ಇಸ್ಮಾಯಿಲ್ ಅವರು ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರಿನ ದಿವಾನರಾಗಿದ್ದರು. ಕಾಗದದ ಕಾರ್ಖಾನೆ, ಸಕ್ಕರೆ ಕಾರ್ಖಾನೆ ಮೊದಲಾದ ಕೈಗಾರಿಕೆಗಳನ್ನು ಸ್ಥಾಪಿಸಲು ಕಾರಣಕರ್ತರಾದರು. ಕೃಷ್ಣರಾಜ ಸಾಗರದ ಅಣೆಕಟ್ಟಿನ ಬಳಿಯಿರುವ ಬೃಂದಾವನ ಉದ್ಯಾನವನ್ನು ನಿರ್ಮಿಸಿದರು. ಸಂಸ್ಥಾನದ ಸಮೃದ್ಧಿ ಮತ್ತು ಸೊಬಗುಗಳಿಗಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದ ಮಿರ್ಜಾ ಇಸ್ಮಾಯಿಲ್ ಅವರು ಮಂಡ್ಯದ ಜೀವನ ಪ್ರಗತಿಯನ್ನು ಬದಲಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದರು.

ಮಿರ್ಜಾ ಅವರ ದೂರದೃಷ್ಟಿಯ ಫಲವಾಗಿ ಜಿಲ್ಲೆಯಲ್ಲಿ ಹಲವು ಜನೋಪಯೋಗಿ ಕಾರ್ಯಗಳು ನಡೆಯಲು ಅವಕಾಶ ದೊರೆಯಿತು. ಮಂಡ್ಯ ನಗರಾಭಿವೃದ್ಧಿಗೆ ವಿಶೇಷ ಗಮನ ನೀಡಿದ ಇವರು ಇಂದಿನ ಮೈಸೂರು–ಬೆಂಗಳೂರು ಮುಖ್ಯ ರಸ್ತೆಯ ಇಕ್ಕೆಲಗಳಲ್ಲಿ ಉದ್ಯಾನವನಗಳು ಹಾಗು ರಸ್ತೆಗಳಿಗೆ ಸಿಮೆಂಟ್ ಹಾಕಿಸಿ ಸುಸಜ್ಜಿತಗೊಳಿಸಿದರು. ಇಂದು ಮೈಸೂರು ಮತ್ತು ಮಂಡ್ಯ ಸುಂದರ ನಗರಗಳೆನಿಸಿಕೊಳ್ಳಲು ಕಾರಣ ಮಿರ್ಜಾ ಅವರ ಸೌಂದರ್ಯಾಭಿರುಚಿ ಯೆನ್ನಬಹುದಾಗಿದೆ.

**ಕನ್ನಂಬಾಡಿ ಕಟ್ಟೆಯ ಬೃಂದಾವನ ಉದ್ಯಾನವನ:**

ಕನ್ನಂಬಾಡಿ ಕಟ್ಟೆಯ ಸೌಂದರ್ಯವನ್ನು ಹೆಚ್ಚಿಸಿ ವಿಶ್ವವಿಖ್ಯಾತಿ ಪಡೆಯಲು ಇಲ್ಲಿ ನಿರ್ಮಿಸಿರುವ ಬೃಂದಾವನ ತೋಟವೂ ಒಂದು ಪ್ರಮುಖ ಕಾರಣವಾಗಿದೆ. ಮೈಸೂರಿಗೆ ಭೇಟಿ ನೀಡಿದ ಪ್ರವಾಸಿಗರು ಕನ್ನಂಬಾಡಿ ಅಣೆಕಟ್ಟೆಗೆ ಭೇಟಿ ನೀಡದೇ ಇರಲಾರರು, ಕನ್ನಂಬಾಡಿ ಅಣೆಕಟ್ಟೆಗೆ ಭೇಟಿ ನೀಡಿದವರು ಅಲ್ಲಿನ ಬೃಂದಾವನದ ಸೊಬಗಿಗೆ ಮಾರುಹೋಗದೆ ಇರಲಾರರು. ಇಂತಹ ಬೃಂದಾವನದ ನಿರ್ಮಾಣಕ್ಕೆ ಕಾರಣರಾದವರು ಸರ್ ಮಿರ್ಜಾ ಇಸ್ಮಾಯಿಲ್. ಇದು ಕಾಶ್ಮೀರದ ಪಾಲಿಮಾರ್ ತೋಟವನ್ನು ನೆನಪಿಸುತ್ತದೆ.

**ಮಂಡ್ಯ ಜಿಲ್ಲಾ ಸಾರ್ವಜನಿಕ ಆಸ್ಪತ್ರೆ:**

ಮಂಡ್ಯ ಜಿಲ್ಲೆಯ ಜನರ ಆರೋಗ್ಯಕ್ಕೆ ಮಹತ್ವವನ್ನು ನೀಡಿದ ಮಿರ್ಜಾರವರು ಜಿಲ್ಲಾ ಕೇಂದ್ರದಲ್ಲಿ ಒಂದು ಸಾರ್ವಜನಿಕ ಆಸ್ಪತ್ರೆಯನ್ನು ತೆರೆಯಲು ಆಸಕ್ತಿ ವಹಿಸಿದರು. ಕೆ.ಆರ್.ಎಸ್ ಅಣೆಕಟ್ಟೆ ನಿರ್ಮಾಣದ ನಂತರ ಮಂಡ್ಯ ಆರ್ಥಿಕವಾಗಿ ಎಷ್ಟು ಮುಂದುವರಿಯಿತೋ ಅಷ್ಟೇ ಪ್ರಮಾಣದಲ್ಲಿ ಇಲ್ಲಿನ ರೋಗರುಜಿನಗಳ ಆವಳಿಗಳು ಹೆಚ್ಚಾದವು. ಮಲೇರಿಯಾ ಕಾಯಿಲೆಯು ಇಲ್ಲಿನ ಜನರನ್ನು ತತ್ತರಿಸುವಂತೆ ಮಾಡಿತು. ಇದಕ್ಕಾಗಿ ಮಿರ್ಜಾ ಅವರು ಮಂಡ್ಯ ಜಿಲ್ಲೆಯಲ್ಲಿ ಸಾರ್ವಜನಿಕ ಆಸ್ಪತ್ರೆಯೊಂದು 1939 ಜೂನ್ 11ರಂದು ಉದ್ಘಾಟಿಸಿದರು.

**ಮಾದರಿ ಮಂಡ್ಯ ಜಿಲ್ಲಾಧಿಕಾರಿ ಭವನ:**

ಮಂಡ್ಯ ಪ್ರದೇಶವು 1939ರವರೆಗೆ ಮೈಸೂರು ಜಿಲ್ಲೆಗೆ ಸೇರಿಕೊಂಡಿತ್ತು. ಮೈಸೂರು ಸಂಸ್ಥಾನವು ಈ ಜಿಲ್ಲೆಯ ರಚನ ಕಾರ್ಯವನ್ನು ಕೈಗೊಂಡ ಸಂದರ್ಭದಲ್ಲಿ ಸಕ್ಕರೆ ಕಾರ್ಖಾನೆಯ ಸ್ಥಾಪನೆಯಾಯಿತು. ಇದರಿಂದಾಗಿ ರಾಜ್ಯಕ್ಕೆ ಮಾದರಿಯಾಗುತ್ತಿದ್ದ ಮಂಡ್ಯವನ್ನು ಜಿಲ್ಲಾ ಕೇಂದ್ರವನ್ನಾಗಿಸಲು ಮಿರ್ಜಾ ಅವರು

ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಸಲಹೆ ನೀಡಿದರು. ನಂತರ ಮಂಡ್ಯ ಜಿಲ್ಲೆಯನ್ನು ಪ್ರತ್ಯೇಕ ಜಿಲ್ಲೆಯೆಂದು ಪರಿಗಣಿಸಲಾಗಿತ್ತು. ಕೆಲಸನಿಮಿತ್ತ ಮಿರ್ಜಾ ಇಸ್ಮಾಯಿಲ್ ಅವರು ಜರ್ಮನಿಗೆ ಹೋಗಿದ್ದಾಗ ಅಲ್ಲಿನ ಕಟ್ಟಡವನ್ನು ಕಂಡು ಅದೇ ಮಾದರಿಯಲ್ಲಿ ಮಂಡ್ಯ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿ ಭವನವನ್ನು ನಿರ್ಮಿಸಿದರು.

**ಜಯಚಾಮರಾಜೇಂದ್ರ ಸೇತುವೆ ಹಲಗೂರು:**

ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನ ಹಲಗೂರಿನ ಸೇತುವೆಯನ್ನು ಜೂನ್ 29, 1939ರಂದು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಉದ್ಘಾಟಿಸಿದರು. ಮಳವಳ್ಳಿ ಪ್ರದೇಶದ ಸುತ್ತಮುತ್ತಲಿನ ಜನರಿಗೆ ಆಗುತ್ತಿದ್ದ ಅನಾನುಕೂಲತೆಗಳನ್ನು ತಪ್ಪಿಸಲು ಹಲಗೂರು ಸೇತುವೆ ಸಹಾಯಕವಾಯಿತು. ಈ ಸೇತುವೆಯ ಮೂಲಕ ರೈತರು ಕಡಿಮೆ ಅವಧಿಯಲ್ಲಿ ಸುತ್ತಮುತ್ತಲಿನ ಊರುಗಳಿಗೆ ಸೇರಲು ಅನುಕೂಲತೆಯನ್ನು ಕಲ್ಪಿಸಲಾಗಿತ್ತು. ಇದರಿಂದ ರೈತರು ತಮ್ಮ ಬೆಳೆಗಳನ್ನು ಸಾಗಿಸಲು ಅನುಕೂಲವಾಗಿ ಅವರ ಆರ್ಥಿಕ ಬದುಕು ಸಾಕಷ್ಟು ಅಭಿವೃದ್ಧಿ ಕಾಣಲು ಕಾರಣವಾಯಿತು. ಇದೇ ಮಾದರಿಯಲ್ಲಿ ಮದ್ದೂರು ಸೇತುವೆ ಮತ್ತು ಶ್ರೀರಂಗಪಟ್ಟಣದ ಸೇತುವೆಗಳ ನಿರ್ಮಾಣದಲ್ಲಿ ಇವರ ಪಾತ್ರ ಪ್ರಮುಖವಾದುದು.

**ಹುಲಿಕೆರೆ ಸುರಂಗ ಕಾಲುವೆ:**

ಹುಲಿಕೆರೆ ಸುರಂಗನಾಲೆ ಏಷ್ಯಾ ಖಂಡದಲ್ಲೇ ಮೊಟ್ಟ ಮೊದಲನೆಯ ಸುರಂಗ ಕಾಲುವೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಅದುವರೆಗೂ ರೈಲು ಸುರಂಗ ಮಾರ್ಗಗಳಿದ್ದುವೇ ಹೊರತು ನೀರಾವರಿ ಸುರಂಗಗಳಿರಲಿಲ್ಲ. ಹುಲಿಕೆರೆ ಸುರಂಗನಾಲೆಯ ಸುರಂಗದೊಳಗೆ 2.80 ಕಿ.ಮೀ ದೂರದವರೆಗೂ ಹರಿಯುವ ನೀರು ಹುಲಿಕೆರೆ ಗ್ರಾಮದ ಹೊರವಲಯದಲ್ಲಿ ಮುಕ್ತಾಯಗೊಳ್ಳುತ್ತದೆ. 1928ರ ನವೆಂಬರ್‌ನಲ್ಲಿ ಆರಂಭಗೊಂಡ ಈ ಸುರಂಗನಾಲೆಯ ನಿರ್ಮಾಣ ಕಾರ್ಯ 1931 ರ ಅಕ್ಟೋಬರ್ ತಿಂಗಳಲ್ಲಿ ಮುಕ್ತಾಯಗೊಳ್ಳುತ್ತದೆ. 4,56,000 ರೂಪಾಯಿಗಳು ವೆಚ್ಚದಲ್ಲಿ ನಿರ್ಮಾಣಗೊಂಡ ನಾಲೆಯಿಂದ ಮಂಡ್ಯ ಜಿಲ್ಲೆಯ 1 ಲಕ್ಷ 500 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ದೊರಕಿತು.

**ಡಾ॥ ಲೆಸ್ಲಿ ಸಿ. ಕೋಲ್ಮನ್:**

ಮಂಡ್ಯ ಜಿಲ್ಲೆಯ ಏಳಿಗೆಗಾಗಿ ದುಡಿದ ಇನ್ನೊಬ್ಬ ವ್ಯಕ್ತಿ ಕೆನಡಾ ದೇಶದ ಡಾ॥ ಲೆಸ್ಲಿ ಸಿ. ಕೋಲ್ಮನ್. ಇವರ ವೈಜ್ಞಾನಿಕ ಪ್ರವೃತ್ತಿಯನ್ನು ಗಮನಿಸಿದ ಮಹಾರಾಜರು, ಇವರನ್ನು ಐದು ವರ್ಷದ ಅವಧಿಗೆ 1912 ರಲ್ಲಿ ಕೃಷಿ ಇಲಾಖೆಯ ಮುಖ್ಯಸ್ಥರನ್ನಾಗಿ

ನೇಮಿಸಿಕೊಂಡರು. ಅಂದು "ರಾಜ್ಯಕ್ಕೆ ಆವರಿಸಿದ್ದ ಲಾಂಟಾನಾ ಕಳೆ ಪಿಡುಗು ತೊಡೆಯಲು ಪರಾವಲಂಬಿ ಕೀಟನಾಶಕವನ್ನು ತಂದು ಸಂಪೂರ್ಣವಾಗಿ ಲಾಂಟನಾ ಕಳೆ ನಾಶಕ್ಕೆ ಇವರು ಕಾರಣರಾದರು. ಹಾಗೆಯೇ ಅಡಿಕೆ ರೋಗಕ್ಕೆ ಹತ್ತಿದ ಕೊಳೆ ರೋಗವನ್ನು ತಡೆಗಟ್ಟಲು ತಾವೇ ಸಂಶೋಧನೆ ಮಾಡಿ ಕೊಳೆರೋಗಕ್ಕೆ ಮದ್ದು ಕಂಡುಹಿಡಿದರು. ಅಡಿಕೆ ಬೆಳೆಯನ್ನು ಕೊಳೆ ರೋಗದಿಂದ ಮುಕ್ತಗೊಳಿಸಿದರು.

**ಪ್ರಾದೇಶಿಕ ಸಂಶೋಧನಾ ಕೇಂದ್ರ ವಿ.ಸಿ.ಫಾರಂ, ಮಂಡ್ಯ:**

ವಿಶ್ವೇಶ್ವರಯ್ಯ ನಾಲಾ ಫಾರಂ (ವಿ.ಸಿ. ಫಾರಂ) ಅನ್ನು 1931 ರಲ್ಲಿ ಮೈಸೂರು ಸಂಸ್ಥಾನದ ಕೃಷಿ ಇಲಾಖೆ ನಿರ್ದೇಶಕರಾಗಿದ್ದ ಲೆಸ್ಲಿ ಸಿ. ಕೋಲ್ಮನ್ ನೇತೃತ್ವದಲ್ಲಿ ಸ್ಥಾಪಿಸಲಾಯಿತು. ಮಂಡ್ಯ ನಗರಕ್ಕೆ ಸುಮಾರು 10 ಕಿ.ಮೀ. ದೂರದಲ್ಲಿ ಮೇಲುಕೋಟೆ ಮಾರ್ಗದ ಎಡಭಾಗದಲ್ಲಿ ಗಾಣದಾಳು ಗ್ರಾಮದ ವ್ಯಾಪ್ತಿಯ ಸುಮಾರು 263 ಹೆಕ್ಟೇರ್ ವಿಸ್ತೀರ್ಣದಲ್ಲಿ (ಸುಮಾರು 650 ಎಕರೆ) ಈ ಕೇಂದ್ರ ಇದ್ದು; ಇಲ್ಲಿ ಕಬ್ಬು, ಭತ್ತ, ರಾಗಿ, ದ್ವಿದಳಧಾನ್ಯ ಮುಂತಾದ ಬೀಜೋತ್ಪಾದನೆ ಹಾಗೂ ಕೃಷಿ ಸಂಶೋಧನೆ ಮಾಡಲಾಗುತ್ತಿತ್ತು. "ವಿಶ್ವೇಶ್ವರಯ್ಯ ನಾಲಾ ಫಾರಂ" ಅದರ ಸಂಕ್ಷಿಪ್ತ ರೂಪವೇ "ವಿ.ಸಿ.ಫಾರಂ". 1965 ರಲ್ಲಿ ರಾಜ್ಯದಲ್ಲಿ ಕೃಷಿ ವಿಶ್ವವಿದ್ಯಾನಿಲಯ ಸ್ಥಾಪನೆಯಾದ ನಂತರ ಇದು ವಿವಿಧೋದ್ದೇಶ ಕೃಷಿ ಸಂಶೋಧನಾ ಕೇಂದ್ರವಾಗಿ ರೂಪುಗೊಂಡಿದೆ.

**ಮೈಸೂರು ಸಕ್ಕರೆ ಕಾರ್ಖಾನೆ:**

ಮಂಡ್ಯ ಜಿಲ್ಲೆಗೆ ನೀರೇನೊ ಬಂತು. ಬರೀ ನೀರಿನಿಂದಲೇ ನಾಡು ಸಂಪದ್ಭರಿತವಾಗಲಾರದು. ಹಾಗೆಯೇ ಅಲ್ಲಿ ಎಷ್ಟೇ ಸಮೃದ್ಧಿ ಬೆಳೆ ತೆಗೆದರೂ ತಾಲ್ಲೂಕಿನ ಅಭಿವೃದ್ಧಿಯಾಗಲಿಲ್ಲ. ಇದನ್ನು ಮನಗಂಡ ಡಾ॥ ಕೋಲ್ಮನ್‌ರವರು ಮಂಡ್ಯ ಜಿಲ್ಲೆಯಲ್ಲಿ ಕೃಷಿಯಾಧಾರಿತ ಕೈಗಾರಿಕೆಯೊಂದನ್ನು ಸ್ಥಾಪಿಸಬೇಕೆಂದೂ ಯೋಚಿಸಿ ದಿವಾನರ ಮೂಲಕ ಮೈಸೂರು ಮಹಾರಾಜರನ್ನು ಕಂಡು ಮನವರಿಕೆ ಮಾಡಿದರು.

'ಮಂಡ್ಯ ಜಿಲ್ಲೆಗೆ ನೀರನ್ನೇನೋ ಒದಗಿಸಿ ಕೊಟ್ಟಿರಿ. ಆ ನೀರಿನ ಸದ್ಬಳಕೆಯಾಗಿ ಜಿಲ್ಲೆಯ ಅಭಿವೃದ್ಧಿಗೆ ಕೃಷಿ ಆಧಾರಿತ ಕೈಗಾರಿಕೆಯೊಂದು ಸ್ಥಾಪನೆಯಾದರೆ ಜಿಲ್ಲೆ ಅಭಿವೃದ್ಧಿ ಹೊಂದುತ್ತದೆ. ಇದಕ್ಕೆ ತಮ್ಮ ಸಹಾಯ–ಸಹಕಾರವನ್ನು ಜಿಲ್ಲೆಯ ಜನತೆ ನಿರೀಕ್ಷಿಸುತ್ತಿದೆ' ಎಂದು ತಮ್ಮ ಸಲಹೆಯನ್ನು ಮಂಡಿಸಿದರು. ಆಗ "ಡಾಕ್ಟರೇ, ದೇಶದ ಯಾವುದೇ ಅಭಿವೃದ್ಧಿ ಕಾರ್ಯಗಳಿಗೆ ನನ್ನ ಸಹಾಯಹಸ್ತ ಇದ್ದೇ ಇದೆ. ನಿಮ್ಮ ಯೋಜನೆಯ ವಿವರಗಳನ್ನು ಕೊಡಿ' ಎಂದು ಮಹಾರಾಜರು ಆಜ್ಞಾಪಿಸಿದರು.

"ಜಿಲ್ಲೆಯಲ್ಲಿ ಹಣಗಳಿಸುವಂತಹ ಕೃಷಿ ಆಧಾರಿತ ಬೆಳೆ ಎಂದರೆ ಕಬ್ಬಿನ ಬೆಳೆ ಈ ಬೆಳೆಯನ್ನು ಜಿಲ್ಲೆಯಾದ್ಯಂತ ಬೆಳೆಸುವುದೆಂದೂ, ಮಂಡ್ಯ ಜಿಲ್ಲೆಯಲ್ಲಿ ಒಂದು ಸಕ್ಕರೆ ಕಾರ್ಖಾನೆ ನಿರ್ಮಿಸುವುದೆಂದೂ ತೀರ್ಮಾನಿಸಿ ಆಗಿನ ದಿವಾನರ ಆಪ್ತರಾಗಿದ್ದ ಇಂಡುವಾಳು ಹೊನ್ನಯ್ಯ ಹಾಗೂ ಅಂದಿನ ಪ್ರಜಾಪ್ರತಿನಿಧಿ ಸಭಾ ಸದಸ್ಯರಾಗಿದ್ದ ಎಸ್.ಸಿ.ಮಲ್ಲಯ್ಯ ಮುಂತಾದ ಹಲವಾರು ಜಿಲ್ಲಾ ಮುಖಂಡರುಗಳ ಜತೆ ಜಿಲ್ಲೆಯ ಎಲ್ಲಾ ಭಾಗಗಳಲ್ಲಿ ಸುತ್ತಾಡಿ ತಮ್ಮ ಯೋಜನೆಯ ವಿವರಗಳನ್ನು ತಿಳಿಸಿದರು. ರೈತರುಗಳ ಮನವೊಲಿಸಿದರು. ಮಂಡ್ಯದಲ್ಲಿ ಕಾರ್ಖಾನೆ ಸ್ಥಾಪಿಸುವ ತಮ್ಮ ಯೋಜನೆಯನ್ನು ಸರ್ಕಾರದ ಮುಂದಿಟ್ಟರು. ಅದೇ ವೇಳೆಗೆ ಭಾರತ ಸರ್ಕಾರವು ಸಕ್ಕರೆ ಆಮದನ್ನು ನಿಲ್ಲಿಸಬೇಕೆಂಬ ತೀರ್ಮಾನವನ್ನು ತೆಗೆದುಕೊಂಡಿತು. ಇದು ಇವರ ಯೋಜನೆಗೆ ವರದಾನವಾಯಿತು. ಜಿಲ್ಲೆಯಾದ್ಯಂತ ಸುತ್ತಾಡಿ ಸುಮಾರು 8 ಲಕ್ಷ ರೂಪಾಯಿಗಳ ಷೇರು ಹಣ ಶೇಖರಿಸಿದರು. ಪರಿಶೀಲನೆಯ ನಂತರ ಮಂಡ್ಯದಲ್ಲಿ ಸಕ್ಕರೆ ಕಾರ್ಖಾನೆಯೊಂದನ್ನು ಸ್ಥಾಪಿಸಲು ಸರ್ಕಾರ ಅನುಮತಿ ನೀಡುವುದರ ಜತೆಗೆ ಹತ್ತು ಲಕ್ಷ ರೂಪಾಯಿಗಳ ಷೇರು ಧನವನ್ನೂ ನೀಡಿತು. ಅಷ್ಟೇ ಅಲ್ಲ ಡಾ॥ ಕೋಲ್ಮನ್ ರವರು 1933ರಲ್ಲಿ ಕಂಪನಿಯ ಪ್ರಥಮ ಆಡಳಿತ ನಿರ್ದೇಶಕರಾಗಿ ನೇಮಕಗೊಂಡರು. ಹೀಗೆ ಕಾರ್ಖಾನೆ ಸ್ಥಾಪನೆಗೆ ಕೋಲ್ಮನ್ ಕಾರಣ. ಕೋಲ್ಮನ್ನರು ಜಿಲ್ಲೆಯ ಪ್ರಮುಖ ನಾಯಕರೊಡನೆ ಕಾರ್ಖಾನೆಗೆ ಬೇಕಾದ ಸ್ಥಳ ಪರಿಶೀಲನೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಿದರು. ನಂತರ ಕೋಲ್ಮನ್ನರು ಕಾರ್ಖಾನೆಗೆ ಬೇಕಾದ ಯಂತ್ರೋಪಕರಣಗಳನ್ನು ಕೊಂಡುಕೊಳ್ಳಲು ಇಂಗ್ಲೆಂಡಿಗೆ ಹೋದರು. ಸ್ಕಾಟ್ಲಂಡಿನ ಮಿರ್ಲೀಸ್ ವಾಟ್ಸನ್ ಕಂಪನಿಯಿಂದ ದಿನಂಪ್ರತಿ ನಾಲ್ಕು ಸಾವಿರ ಟನ್ ಕಬ್ಬನ್ನು ಅರೆಯುವ ಸಾಮರ್ಥ್ಯದ ಯಂತ್ರೋಪಕರಣ ಕೊಂಡು ಯಂತ್ರೋಪಕರಣಗಳ ಸಮೇತ ಕೋಲ್ಮನ್‌ರು ಮಂಡ್ಯಕ್ಕೆ ಬಂದಿಳಿದರು. ಹೀಗೆ ಕೋಲ್ಮನ್‌ರವರು ಹಿಡಿದ ಕೆಲಸವನ್ನು ಬಿಡದೆ ಸಾಧಿಸುತ್ತಿದ್ದರು".[9]

ತಜ್ಞರುಗಳಿಂದ ಕಾರ್ಖಾನೆಯ ಯಂತ್ರಗಳ ಜೋಡಣೆ ಆಯಿತು. ಕಬ್ಬು ಅರೆಯುವ ಕಾರ್ಯ 15–12–1933 ರಂದು ವಿಧ್ಯುಕ್ತವಾಗಿ ಪ್ರಾರಂಭವಾಯಿತು. ಮೊದಲ ವರ್ಷದಲ್ಲಿಯೇ ಮೂರು ಲಕ್ಷ ರೂಪಾಯಿಗಳ ನಿವ್ವಳ ಲಾಭ ಬಂತು. ಇದರಿಂದ ಉತ್ತೇಜನ ಪಡೆದ ರೈತ ಸಮುದಾಯ ಹೆಚ್ಚು ಹೆಚ್ಚು ಕಬ್ಬು ಬೆಳೆಯಲು ಪ್ರಾರಂಭಿಸಿತು. ವರ್ಷ ವರ್ಷ ಅಭಿವೃದ್ಧಿಗೊಂಡ ಕಾರ್ಖಾನೆ ಈಗ ದಿನಂಪ್ರತಿ ಐದುಸಾವಿರ ಟನ್ ಗಿಂತ ಹೆಚ್ಚು ಕಬ್ಬನ್ನು ಅರೆಯುವ ಸಾಮರ್ಥ್ಯ ಪಡೆದುಕೊಂಡಿದೆ.

"ಮೈಸೂರು ಸಕ್ಕರೆ ಕಂಪನಿಯವರು ಮೇ 1994ರಲ್ಲಿ ಕಂಪನಿಯ ವಜ್ರಮಹೋತ್ಸವವನ್ನು ಆಚರಿಸಿದ ಸಂದರ್ಭದಲ್ಲಿ ಕೋಲ್ಮನ್‌ರ ಸಂಸ್ಮರಣೆಯ

ದ್ಯೋತಕವಾಗಿ ಕಾರ್ಖಾನೆಯ ಆವರಣದಲ್ಲಿ ಡಾ.ಕೋಲ್ಮನ್‌ರವರ ಕಂಚಿನ ಪ್ರತಿಮೆಯನ್ನು ನಿರ್ಮಿಸಿ ಅಂದಿನ ಉಪ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ರವರ ಅಧ್ಯಕ್ಷತೆಯಲ್ಲಿ ಕರ್ನಾಟಕದ ಅಂದಿನ ಮುಖ್ಯಮಂತ್ರಿ ಎಂ.ವೀರಪ್ಪ ಮೊಯ್ಲಿ ಅವರಿಂದ ದಿನಾಂಕ 11/4/1994 ರಂದು ಅನಾವರಣಗೊಳಿಸಲಾಯಿತು. ವಿ.ಸಿ. ಫಾರಂನಲ್ಲಿಯೂ ಕೋಲ್ಮನ್‌ರವರ ಹೆಸರಿನಲ್ಲಿ ಭವ್ಯವಾದ ಸಭಾಂಗಣ ಇರುವುದು ವಿಶೇಷ".

ಮಂಡ್ಯ ಜಿಲ್ಲೆಯ ಜನರ ಉಸಿರೊಡನೆ ಬೆರೆತು ಹೋದವರು ನಾಲ್ವಡಿ ಕೃಷ್ಣರಾಜ ಒಡೆಯರ್. ಅವರ ಆಶಯಗಳಿಗೆ ರೆಕ್ಕೆ ರೂಪಿಸಿದವರು ಸರ್.ಎಂ. ವಿಶ್ವೇಶ್ವರಯ್ಯ, ಜೊತೆಗೆ ಮಿರ್ಜಾ ಇಸ್ಮಾಯಿಲ್ ಸ್ಟೈಲ್ ಮಂಡ್ಯಕ್ಕೆ ಆಡಳಿತಾತ್ಮಕವಾದ ಹೆಬ್ಬಾಗಿಲು ತೆರೆಯಿತು. ನೀರು ಹರಿದ ನಾಡಿನಲ್ಲಿ ಅದನ್ನು ಸಿಹಿಯಾದ ಸಕ್ಕರೆಯಾಗಿಸಲು ಅಕ್ಕರೆಯಿಂದ ಕೈಜೋಡಿಸಿದ್ದ ಕೋಲ್ಮನ್, ಇವರ ಸಾಧನೆಗಳ ಕಾರಣದಿಂದಾಗಿ ಮಂಡ್ಯ ಜಿಲ್ಲೆಯು ಹಲವು ಸ್ಥಿತ್ಯಂತರ/ಪರಿವರ್ತನೆಗೆ ಒಳಗಾಯಿತು. ಹೀಗೆ ಸ್ವಾತಂತ್ರ್ಯಪೂರ್ವದ ರಾಜಪ್ರಭುತ್ವದ ವ್ಯವಸ್ಥೆಯಡಿಯಲ್ಲಿ ಅನೇಕ ಜನಪರ ಕಾರ್ಯಯೋಜನೆಗಳು ಸಾಕಾರಗೊಂಡಿದ್ದವು. ಮೈಸೂರು ಸಂಸ್ಥಾನ ಹಾಗೂ ಅದರ ಭಾಗವಾಗಿದ್ದ ಮಂಡ್ಯ ಜಿಲ್ಲಾ ಪ್ರಗತಿಗಾಗಿ ಮಹಾರಾಜರು, ದಿವಾನರು ಸಾಕಷ್ಟು ಶ್ರಮವಹಿಸಿದ್ದಾರೆ.

## ಅಡಿಟಿಪ್ಪಣಿಗಳು:

1. ಲಿಂಗರಾಜು ತಂಡಸನಹಳ್ಳಿ. (2020). ಮೇಲುಕೋಟೆ. ಕೀರ್ನಟ್ಟಿ ಪ್ರಕಾಶನ. ಮಂಡ್ಯ. ಪು.ಸಂ. 89
2. ಅನಿತ ಎಂ. ಎಸ್. (2016). ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್. ಮೈಸೂರು ವಿಶ್ವವಿದ್ಯಾಲಯ ಶತಮಾನೋತ್ಸವದ ಸಂಭ್ರಮಾಚರಣೆ ಸಮಿತಿ, ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು. ಪು.ಸಂ. 152
3. ಅದೇ. ಪು.ಸಂ. 89
4. ರವಿಕುಮಾರ್ ಚಾಮಲಾಪುರ. (2016). ಮಂಡ್ಯ ಸೊಗಡು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್. ಮಂಡ್ಯ. ಪು.ಸಂ. 211
5. Report of the Special Committee constituted on Krishnaraja Sagara Reservior. Bangalore. (1950). P. 12
6. ಪ್ರಧಾನ್ ಗುರುದತ್ತ (ಸಂ). (2016). ಮಹಾಯಂತ್ರರ್ಷಿ ಸರ್.ಎಂ.ವಿಶ್ವೇಶ್ವರಯ್ಯ. ಮೈಸೂರು ವಿಶ್ವವಿದ್ಯಾಲಯ ಶತಮಾನೋತ್ಸವದ ಸಂಭ್ರಮಾಚರಣೆ ಸಮಿತಿ, ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು. ಪು.ಸಂ. 30

7. ಪ್ರಧಾನ್ ಗುರುದತ್ತ (ಸಂ). (2016). ಮಹಾಯಂತ್ರರ್ಷಿ ಸರ್.ಎಂ.ವಿಶ್ವೇಶ್ವರಯ್ಯ. ಮೈಸೂರು ವಿಶ್ವವಿದ್ಯಾಲಯ ಶತಮಾನೋತ್ಸವದ ಸಂಭ್ರಮಾಚರಣೆ ಸಮಿತಿ, ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು. ಪು.ಸಂ. 30
8. ನಿಂಗಣ್ಣ ಬಂಧುಕರ್ (ಸಂ). (2015). ಮಂಡ್ಯ ಜಿಲ್ಲೆಯ ಮುಕುಟು ಮಣಿಗಳು. ಶ್ರೀ ರಾಮ ಪ್ರಕಾಶನ. ಮಂಡ್ಯ. ಪು.ಸಂ. 05
9. ನಿಂಗಣ್ಣ ಬಂಧುಕರ್ (ಸಂ). (2015). ಮಂಡ್ಯ ಜಿಲ್ಲೆಯ ಮುಕುಟು ಮಣಿಗಳು. ಶ್ರೀ ರಾಮ ಪ್ರಕಾಶನ. ಮಂಡ್ಯ. ಪು.ಸಂ. 06